ಆಡಳಿತಕ್ಕೆ ಮನವಿ ಕೊಟ್ಟರೂ ಏನೂ ಆಗಿಲ್ಲ. ಕೊಡಗಿನ ಜನತೆಗೆ ಕಾವೇರಿ ನದಿಯ ಮೇಲೆ ಭಾವನಾತ್ಮಕವಾದ ಭಾವನೆ ಇದೆ, ಇದರಿಂದ ಯಾರು ಈವತ್ತು ಗೋ ಹತ್ಯೆ ಮಾಡುತ್ತಿದ್ದಾರೆ, ಅವರ ವಿರುದ್ಧ ಏನಾದರೂ ಕ್ರಮ ಕೈಗೊಳ್ಳದಿದ್ದರೆ ಮತ್ತೆ ಜಿಲ್ಲೆಯಲ್ಲಿ ಅಶಾಂತಿಯ ವಾತಾವರಣ ಆಗಬಹುದು. ನಾನು ಸರ್ಕಾರವನ್ನು ವಿನಂತಿ ಮಾಡುತ್ತೇನೆ, ಯಾರು ಈ ರೀತಿಯಾಗಿ ದುಷ್ಕೃತ್ಯದಲ್ಲಿ ತೊಡಗಿದ್ದಾರೆ, ಗೋಪತ್ಯೆ ಮಾಡುತ್ತಿದ್ದಾರೆ, ಅವರ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಂಡು ಮತ್ತೆ ಜಿಲ್ಲೆಯಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಇಲಾಖೆ): ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ವ್ಯಾಪಕವಾಗಿ ಪತ್ರಿಕೆಯಲ್ಲಿ ಛಾಯಚಿತ್ರಗಳ ಸಮೇತವಾಗಿ ಬಂದಿರುವುದನ್ನು ನಾವು ನೋಡಿದ್ದೇವೆ. ಇದರ ಹಿನ್ನೆಲೆಯಲ್ಲಿ ಏನಾದರೂ ದೊಡ್ಡ ಜಾಲ ಇದೆಯೋ ಏನೋ ಗೊತ್ತಿಲ್ಲ. ವ್ಯವಸ್ಥಿತವಾಗಿ ಕಲುಷಿತಗೊಳಿಸತಕ್ಕಂಥದ್ದು ಏನು ಇದೆ ಇದು ಶಿಕ್ಷಾರ್ಹವಾದ ಅಪರಾಧ. ಗೋ ಹತ್ಯೆ ಮೊದಲಾದವುಗಳನ್ನು ಮಾಡುವಂಥದ್ದು ಶಿಕ್ಷಾರ್ಹ ಅಪರಾಧಗಳಾಗಿವೆ. ಆ ಕಾರಣಕ್ಕಾಗಿ ಬಹಳ ಗುರುತರವಾದ ವಿಚಾರವನ್ನು ತಾವು ಪ್ರಸ್ತಾಪಿಸಿದ್ದೀರಿ. ನಾನು ಈ ಬಗ್ಗೆ ಅಲ್ಲಿನ ಪೋಲಿಸ್ ಅಧಿಕಾರಿಗಳ ಜೊತೆಗೆ ಮತ್ತು ನೀರಾವರಿ ಇಲಾಖೆಯ ಅಧಿಕಾರಿಗಳ ಜೊತೆಗೆ ವರದಿಯನ್ನು ತರಿಸಿಕೊಂಡು ನಾನು ನಾಳೆ ತಮಗೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಧ್ಯಾಹ್ನ ಹೇಳಿಕೆ ನೀಡುತ್ತೇನೆಂದು ಹೇಳಿದ್ದರು, ಅವರು ಅಲ್ಲಿದ್ದಾರೆ, ನಂತರ ಇಲ್ಲಿಗೆ ಬರುತ್ತಾರೆ. ಯೋಗೀಶ್ ಭಟ್ ರವರೇ ನಿಮ್ಮದೇನು ಇದೆ ಅದನ್ನು ತಾವು ಕೇಳಿಬಿಡಿ

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆ ಮಾತ್ರವಲ್ಲ ಇಡೀ ರಾಜ್ಯದ ಇನ್ನಿತರ ಜಿಲ್ಲೆಗಳಲ್ಲಿರುವ ರಿಕ್ಷಾ ಡ್ರೈವರ್‌ಗಳ ಪರವಾಗಿ ಹಾಗೂ ಟೂರಿಸ್ಟ್ ಟ್ಯಾಕ್ಸಿ ಯಾರು ಇದ್ದಾರೆ ಅವರ ಪರವಾಗಿ ನಾನೊಂದು ವಿನಂತಿ ಮಾಡುತ್ತಿದ್ದೇನೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಆಗಿರುವ ಹಿನ್ನೆಲೆಯಲ್ಲಿ, ಈಗಾಗಲೇ ಖಾಸಗಿ ಕಂಪನಿಗಳಿಂದ ಕಮರ್ಷಿಯಲ್ ಗ್ಯಾಸ್ ಆಧಾರಿತವಾದಂಥ ಕಿಟ್‌ಗಳನ್ನು ಕೊಡುತ್ತಿದ್ದಾರೆ. ಇದನ್ನು ಉಪಯೋಗಿಸಿಕೊಂಡು ಅವರು ಸಂಚರಿಸುತ್ತಿದ್ದಾರೆ.

ಇದರ ಮೂಲಕ ಅವರ ವಾಹನ ಸಂಚಾರ ಆಗುತ್ತಿರುವುದರಿಂದ ಏನಾದರೂ ಅಲ್ಪ ಸ್ವಲ್ಪ ಉಳಿತಾಯ ಆಗಿ ರಾತ್ರಿ ಮನೆಗೆ ಹೋಗುವಾಗ ತಮ್ಮ ಮಕ್ಕಳಿಗೆ ಏನಾದರೂ ಕೊಡುವ ನಿಟ್ಟಿನಲ್ಲಿ ಸಂಪಾದನೆ ಮಾಡಲಿಕ್ಕೆ ಹಾಗೂ ಉಳಿತಾಯ ಮಾಡಲಿಕ್ಕೆ ಸಾಧ್ಯವಾಗಬಹುದು. ಆದರೆ ಈಗ ಏನಾಗಿದೆ ಕಾನೂನಿನ ತೊಡಕುಗಳಿಂದಾಗಿ ವಿಶೇಷವಾಗಿ ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲೈಸೆನ್ಸನ್ನು ರಿನ್ಯೂವಲ್ ಮಾಡುತ್ತಿಲ್ಲ ಎನ್ನುವ ಆರೋಪ ಬಂದಿದೆ. ಲೈಸೆನ್ಸನ್ನು ರಿನ್ಯೂವಲ್ ಮಾಡುತ್ತಿಲ್ಲವೆಂದು ಆರೋಪ ಕೇಳಿ ಬರುತ್ತಿದೆ. ಆದ್ದರಿಂದ, ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಡಿ. ಮತ್ತೆ ಎಲ್.ಎನ್.ಜಿ. ಗ್ಯಾಸ್ ಬಂಕ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಸಂಬಂಧಪಟ್ಟವರಿಂದ ಅನುಮತಿ ಕೊಡಿಸತಕ್ಕಂಥ ವ್ಯವಸ್ಥೆ ಮಾಡಿ. ಬೇರೆ ರಾಜ್ಯಗಳಲ್ಲಿ, ಅದರಲ್ಲಿಯೂ ವಿಶೇಷವಾಗಿ ದೆಹಲಿಯಲ್ಲಿ ಅನಿಲ ಆಧಾರಿತ ಇಂಧನ ಉಪಯೋಗ ಮಾಡಲಾಗುತ್ತಿದೆ. ಆದ್ದರಿಂದ, ಇಲ್ಲಿಯೂ ಕೂಡ ಅನಿಲ ಆಧಾರಿತ ಇಂಧನ ಉಪಯೋಗ ಮಾಡುವುದಕ್ಕೆ ವಿಶೇಷವಾದ ಒತ್ತನ್ನು ಕೊಡಬೇಕಾಗುತ್ತದೆ. ಇವತ್ತಿನ ದಿವಸ ದೆಹಲಿಯಲ್ಲಿ ಅನಿಲ ಆಧಾರಿತ ಇಂಧನವನ್ನು ಉಪಯೋಗ ಮಾಡುತ್ತಿರುವುದರಿಂದ ಅಲ್ಲಿನ ವಾತಾವರಣದಲ್ಲಿ ಮಾಲಿನ್ಯ ಇಲ್ಲ. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುವುದರ ಜೊತೆಗೆ ಮಾನ್ಯ ಸಚಿವರು ಇದಕ್ಕೆ ಸ್ಪಂದಿಸಿ ನಮ್ಮ ರಾಜ್ಯದ ಎಲ್ಲಾ ಕಡೆ ಈ ರೀತಿಯಾದ ಗ್ಯಾಸ್ ಬಂಕ್‌ಗಳು ಬರುವಂತ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ಹಾಗೆಯೇ, ಆಟೋರಿಕ್ಷಾವನ್ನು ಕಮರ್ಷಿಯಲ್ ಗ್ಯಾಸ್ ಕಿಟ್ ನಿಂದ ಓಡಿಸುವುದಕ್ಕೆ ಅನುಕೂಲ ಮಾಡಿಕೊಡಬೇಕಾಗಿದೆ. ಇದಕ್ಕೆ ಏನಾದರು ಕಾನೂನಿನಲ್ಲಿ ತೊಡಕು ಇದ್ದರೆ ಅದನ್ನು ಕ್ಲಿಯರ್ ಮಾಡಿ ಲೈಸೆನ್ಸ್ ಅನ್ನು ರಿನ್ಯೂವಲ್ ಮಾಡುವ ನಿಟ್ಟಿನಲ್ಲಿ ತಾವು ಸಹಕಾರ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಒಂದು ನಿಟ್ಟಿನಲ್ಲಿ ಅವರು ಏನಾದರು ಸ್ವಲ್ಪ ಸೇವಿಂಗ್ಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ, ದಯವಿಟ್ಟು ಇದರ ಬಗ್ಗೆ ಸ್ಪಂದಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):- ಮಾನ್ಯ ಅಧ್ಯಕ್ಷರೆ, ಈವಿಷಯ ಫುಡ್ ಅಂಡ್ ಸಿವಿಲ್ ಸಪ್ಲೈ ಮಿನಿಸ್ಟರ್ ರವರಿಗೆ ಬರುತ್ತದೆ. ಆದ್ದರಿಂದ, ಈ ವಿಷಯವನ್ನು ಅವರಿಗೆ ಹೇಳಿ ಇದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ತಿಳಿಸುತ್ತೇನೆ.